

## ಚೆಂಡು ಹೂ ಚೆಲ್ಲಾಡುತಾವ...

# ಜಿಲ್ಲರಗುಂಟೆ ಜಾತ್ರೆ



ಆಂಧ್ರ ಗಡಿಭಾಗದ ಜಿಲ್ಲರಗುಂಟೆ ಮತ್ತು ಭಕ್ತರಹಳ್ಳಿ ಕನ್ನಡಿಗರೇ ಹೆಚ್ಚಾಗಿ ಇರುವ ಪ್ರದೇಶಗಳು. ಚೆಂಡು ಹೂವಿನ ಆರತಿಗೆ ಪ್ರಸಿದ್ಧಿಯಾಗಿರುವ ಜಿಲ್ಲರಗುಂಟೆ ಜಾತ್ರೆ ಹತ್ತಾರು ಆಸಕ್ತಿದಾಯಕ ಆಚರಣೆಗಳ ಸಂಗಮ. ಹೊಸ ವರ್ಷದೊಂದಿಗೆ ಜಾತ್ರೆಗಳ ಋತು ಆರಂಭವಾಗುತ್ತಿದೆ. ಈ ಸಂಭ್ರಮಕ್ಕೆ ಮುನ್ನುಡಿ ರೂಪದಲ್ಲಿ ಜಿಲ್ಲರಕುಂಟೆ ಜಾತ್ರೆಯ ನುಡಿಚಿತ್ರ.

**■ ಕೃಷ್ಣ ಪ್ರಸಾದ್**

ಸುತ್ತಮುತ್ತ ಎತ್ತ ನೋಡಿದರೂ ಬಟಾಬಯಲು. ಬಯಲಿನ ನಡುವೆ, ದೂಳು ತುಂಬಿದ ಹಳ್ಳಿ ರಸ್ತೆಯ ಮೇಲೆ ಜನವೋ ಜನ. ಗುಳೆ ಹೊರಟಂತೆ ಗುಂಪು ಗುಂಪಾಗಿ ಕಾಣುವ ಇರುವೆ ಸಾಲು. ವರ್ಷಕ್ಕೊಮ್ಮೆ ಬರುವ ಜಿಲ್ಲರಗುಂಟೆ ಜಾತ್ರೆ ಈ ಬೆಂಗಾಡಿಗೆ ಕಳೆ ಕಟ್ಟುತ್ತದೆ.

ಬರಗಾಲವನ್ನೇ ಹೊದ್ದು ಮಲಗಿರುವ ಮಧುಗಿರಿ, ಶಿರಾ, ಪೆನುಗೊಂಡ, ಮಡಕಶಿರಾ, ಹಿಂದೂಪುರ ಮತ್ತು ಪಾವಗಡದ ಬಹುಪಾಲು ಹಳ್ಳಿಗರ ಮನೆದೇವರು ಭಕ್ತರಹಳ್ಳಿ ನರಸಿಂಹ ಸ್ವಾಮಿ ಮತ್ತು ಜಿಲ್ಲರಗುಂಟೆ ಆಂಜನೇಯ ಸ್ವಾಮಿ. ಫರ್ಲಾಂಗ್ ದೂರವಿರುವ ಎರಡು ಊರುಗಳ ಮಧ್ಯೆ ಬೈತಲೆ ತೆಗೆದಂತೆ ಹಳ್ಳ ಇದೆ.

ಮಣೂರಿನ ಕದಿರಮ್ಮ ತಮ್ಮ ಹೊಲದಲ್ಲಿ ಬೆಳೆದ ಚೆಂಡು ಹೂಗಳ ಆರತಿಯೊಂದಿಗೆ